# ● ಸುದ್ದಿ ಸಂಚಯ ●

## ಕೊಡಗಿನಲ್ಲಿ ನೆರೆಹಾವಳಿ ಪರಿಹಾರ



ಸ್ವಾಮಿ ಜಗದಾತ್ಮಾನಂದಜಿ ಪರಿಹಾರ ಸಾಮಗ್ರಿಗಳನ್ನು ವಿತರಿಸುತ್ತಿರುವುದು.

ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಕೊಡಗಿನಲ್ಲಿ ಅಸಂಖ್ಯಾತ ಜನ ಸಂತ್ರಸ್ತರಾಗಿದ್ದಾರೆ. ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದ ವತಿಯಿಂದ ೮ ಗ್ರಾಮ ಪಂಚಾಯತಿಗಳಿಗೆ ಸೇರಿದ, ೨೪ ಹಳ್ಳಿಗಳಲ್ಲಿ ಪರಿಹಾರ ಕಾರ್ಯವನ್ನು ನಡೆಸಲಾಯಿತು. ೨೪.೦೮.೨೦೦೭ರಂದು ಆರಂಭಗೊಂಡ ಈ ಕಾರ್ಯ ೩೦.೮.೨೦೦೭ರಂದು ಸಂಪನ್ನಗೊಂಡಿತು. ಇದರಲ್ಲಿ, ೭೪೨ ಕುಟುಂಬಗಳಿಗೆ ೬೦೦ ಕಂಬಳಿಗಳನ್ನು ಮತ್ತು ೩೦೦ ಉಣ್ಣೆಯ ಶಾಲುಗಳನ್ನು ವಿತರಿಸಲಾಯಿತು.

## ಸ್ವಾತಂತ್ರ್ಯ ದಿನದಂದು ವಿಚಾರ ಸಂಕಿರಣ



ಡಾ. ವಿವೇಕ ರೈ ಭಾಷಣ ಮಾಡುತ್ತಿರುವುದು

**೬೦**ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು **'ಸ್ವಾಮಿ ವಿವೇಕಾನಂದ ಮತ್ತು ರಾಷ್ಟ್ರೀಯತೆ'** ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ೧೭೫ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಆತ್ಮಜ್ಞಾನಂದಜಿ, ಶ್ರೀ ಪ್ರಭುಶಂಕರ ಡಾ. ಸಿ. ಕೆ. ಎನ್. ರಾಜ, ಡಾ. ಎಚ್. ಎನ್. ಮುರಳೀಧರ, ಶ್ರೀ ಚಕ್ರವರ್ತಿ ಸೂಲಿಬೆಲೆ, ಡಾ. ಬಾಲಸುಬ್ರಹ್ಮಣ್ಯಂ, ಶ್ರೀ ಎನ್. ಎಸ್. ಚಕ್ರವರ್ತಿ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ವಿವೇಕ ರೈ, ಮುಂತಾದ ಗಣ್ಯರು ಭಾಷಣ ಮಾಡಿದರು.

## ಮಂಗಳೂರಿನಲ್ಲಿ ಯುವ ಸಮ್ಮೇಳನ–ಶಿಕ್ಷಕ ಸಮ್ಮೇಳನ




ಶಿಕ್ಷಕ ಸಮ್ಮೇಳನದಲ್ಲಿ ಶ್ರೀ ಅನಂತಕೃಷ್ಣ, ಸ್ವಾಮಿ ಪೂರ್ಣಕಾಮಾನಂದಜಿ

ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸೆಪ್ಟೆಂಬರ್ ೭ರಂದು ಯುವ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಚೆನ್ನೈನ ಸ್ವಾಮಿ ಬೋಧಮಯಾನಂದಜಿ ಅವರು 'ಸ್ವಾಮಿ ವಿವೇಕಾನಂದ ಮತ್ತು ಯುವ ನಾಯಕತ್ವ', ನಂತರ ಶ್ರೀ ಸುರೇಶ್ ಕುಲಕರ್ಣಿ ಅವರು 'ಸೃಜನ ಶೀಲತೆ'ಯ ಬಗ್ಗೆ ಮಾತನಾಡಿದರು. ಕೊನೆಗೆ ಮಂಗಳೂರು ಮಠದ ಅಧ್ಯಕ್ಷರಾದ ಸ್ವಾಮಿ ಪೂರ್ಣಕಾಮಾನಂದಜಿ ಅವರು ಪ್ರತಿಭಾನ್ವಿತ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಿದರು. ಮರುದಿನ ದಿನಾಂಕ ೮ರಂದು ಶಿಕ್ಷಕ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನಂತಕೃಷ್ಣ ಉದ್ಘಾಟಿಸಿದರು. ಸ್ವಾಮಿ ಬೋಧಮಯಾನಂದಜಿ 'ಸ್ಫೂರ್ತಿಭರಿತ ಶಿಕ್ಷಕರಾಗುವುದು ಹೇಗೆ?' ಎಂಬ ವಿಷಯವಾಗಿ ಮತ್ತು ಶ್ರೀ ಸುರೇಶ್ ಕುಲಕರ್ಣಿ 'ಪರಿಣಾಮಕಾರಿ ಬೋಧನೆ' ಎಂಬ ವಿಷಯವಾಗಿಯೂ ಮಾತನಾಡಿದರು. ಕಡೆಯಲ್ಲಿ ಡಾ. ಬಿ.ಎಂ. ಹೆಗ್ಡೆ ಅವರು ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರದ ಬಗ್ಗೆ ವಿವರಿಸಿದರು. ಮೇಲಿನ ಕಾರ್ಯಕ್ರಮಗಳಲ್ಲಿ ೬೦೦ ಯುವಕರು, ೬೫೦ ಶಿಕ್ಷಕರೂ ಪಾಲ್ಗೊಂಡಿದ್ದರು ✿

ತುತ್ತು ಅನ್ನಕ್ಕಾಗಿ ಬೀದಿ ಬೀದಿಗಳಲ್ಲಿ ಭಿಕ್ಷೆ ಬೇಡಿ, ಕಸದ ತೊಟ್ಟಿಯನ್ನು ಆಯ್ದು ಜೀವಿಸುವ ಅನೇಕ ಮಕ್ಕಳಿಗೆ ಆಸರೆಯಾಗಿ **ಆಶಾದಾಯಕ ಟ್ರಸ್ಟ್** ಮೈಸೂರಿನಲ್ಲಿ ಸೇವೆ ಸಲ್ಲಿಸುತ್ತಿದೆ. ಇಲ್ಲಿ ಇದುವರೆಗೂ ೧೨೫ ಮಕ್ಕಳಿಗೆ ಪುನರ್ವಸತಿ ಕಲ್ಪಿಸಲಾಗಿದೆ ಮತ್ತು ೩೩ ಮಕ್ಕಳು ಸದ್ಯಕ್ಕೆ ಆಶ್ರಯವನ್ನು ಪಡೆದಿದ್ದಾರೆ. ಆಗಸ್ಟ್ ೧೯, ಭಾನುವಾರದಂದು ಮೈಸೂರು ಆಶ್ರಮದಲ್ಲಿ ಈ ಮಕ್ಕಳಿಗಾಗಿ ನಡೆದ ಒಂದು ವಿಶೇಷ ಕಾರ್ಯಕ್ರಮದಲ್ಲಿ ಅವರೆಲ್ಲರೂ ಭಜನೆ ಮಾಡಿದರು; ಕತೆ ಕೇಳಿದರು; ಪ್ರಸಾದವನ್ನುಂಡರು. ಅವರೆಲ್ಲರಿಗೂ ಉಚಿತ ಬಟ್ಟೆಬರೆಗಳನ್ನು ವಿತರಿಸಲಾಯಿತು. ಆಶಾದಾಯಕ ಟ್ರಸ್ಟ್‌ಗೆ ಸಹಾಯ ಮಾಡಲು ಬಯಸುವವರು ಕೆಳಗಿನ ವಿಳಾಸಕ್ಕೆ ತಮ್ಮ ದೇಣಿಗೆಯನ್ನು ಕಳುಹಿಸಬಹುದು: **ವ್ಯವಸ್ಥಾಪಕರು, ಆಶಾದಾಯಕ ಟ್ರಸ್ಟ್, ನಂ.೨೨೦೩/೬೨, ಜಾವ ಮುಸ್ಕಿ ರಸ್ತೆ, ಮೇದರ್ ಬ್ಲಾಕ್, ಸ್ಕೂ ಬಂಬೂ ಬಜಾರ್, ಮೈಸೂರು -೫೭೦ ೦೨೧** ✿